**ಓ ಎಸ್ ನಂಃ 300-20**
**ಪಿ ಡಬ್ಲ್ಯೂ ಃ 1**

**ದಿಃ 09-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಆರ್ ಎಚ್ ವಕೀಲರಿಂದ**

15. ನಾನು ಯಾವ ದಿನಾಂಕ ಜನಿಸಿರುತ್ತೇನೆ ಗೊತ್ತಿಲ್ಲ. ಗುಲಾಂ ಹುಸೇನ್ ರವರು ನನಗೆ ತಾತನಾಗಬೇಕು. ಗುಲಾಂ ಹುಸೇನ್ ರವರಿಗೆ ಒಬ್ಬರು ಹೆಣ್ಣು ಮಗಳು ಮತ್ತು ಐವರು ಗಂಡು ಮಕ್ಕಳು ಇರುತ್ತಾರೆ. ಗುಲಾಂ ಹುಸೇನ್ ರವರ ಗಂಡು ಮಕ್ಕಳ ಹೆಸರು ಮೊದಲನೇಯವರು ಅಕ್ಬರ್ ಸಾಬ್, 2 ನೇಯವರು ಅಮೀರ್ ಸಾಬ್, 3 ನೇಯವರು ದಸ್ತಗೀರ್ ಸಾಬ್, 4 ನೇಯವರು ಅಬ್ದುಲ್ ಶುಕೂರ್, 5 ನೇಯವರು ನಜೀರ್ ಆಗಿರುತ್ತದೆ. ಗುಲಾಂ ಹುಸೇನ್ ರವರ ಮಗಳ ಹೆಸರು ಗೊತ್ತಿಲ್ಲ. ಗುಲಾಂ ಹುಸೇನ್ ರವರ ಮಗಳ ಹೆಸರು ಪ್ಯಾರಿ ಆಗಿದ್ದು ಅವರು ಈಗ ತೀರಿಕೊಂಡಿರುತ್ತಾರೆ ಎಂದರೆ ನಿಜ. ನನ್ನ ತಂದೆ ಮಹಮ್ಮದ್ ಅಕ್ಬರ್ ರವರು ಗುಲಾಂ ಹುಸೇನ್ ರವರ ಮೊದಲನೇ ಮಗ ಎಂದರೆ ನಿಜ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ 6 ಜನ ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆಯ ವಾದಿಗಳಾದ ನಾವು ಅಕ್ಬರ್ ಸಾಬ್ ರವರ ಗಂಡು ಮಕ್ಕಳಾಗಿರುತ್ತೇವೆ. ಅಕ್ಬರ್ ಸಾಬ್‌ರವರ ಹೆಣ್ಣು ಮಕ್ಕಳ ಹೆಸರು ಮಕಬುಲ್ ತಾಜ್, ಕುರ್ಷಿದ್ ಉನ್ನಿಸಾ, ಜರೀನಾ ತಾಜ್, ನೂರ್ ಜಾನ್, ಹಸೀನಾ ತಾಜ್ ಮತ್ತು ನಗೀನಾ ತಾಜ್ ಆಗಿರುತ್ತಾರೆ. ನಿಪಿ 4 ರಲ್ಲಿ ಗುಲಾಂ ಹುಸೇನ್‌ರವರ ಎಲ್ಲಾ ಮಕ್ಕಳ ಹೆಸರು ಮತ್ತು ಅಕ್ಬರ್ ಸಾಬ್ ರವರ ಎಲ್ಲಾ ಮಕ್ಕಳ ಹೆಸರು ಇರುವುದಿಲ್ಲ ಎಂದರೆ ನಿಜ. ನಿಪಿ 4 ರಲ್ಲಿ ಹೆಣ್ಣು ಮಕ್ಕಳ ಹೆಸರು ಇರುವುದಿಲ್ಲ. ಆದ ಕಾರಣ ನಿಪಿ 4 ಸುಳ್ಳು ಇರುತ್ತದೆ ಎಂದರೆ ನಾವು ಗಂಡು ಮಕ್ಕಳ ವಂಶವೃಕ್ಷವನ್ನು ಮಾತ್ರ ಕೊಟ್ಟಿದ್ದು ಹೆಣ್ಣು ಮಕ್ಕಳು ನಮಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ.

16. ಸಾಕ್ಷಿಗೆ ಈಗ ನಿಪಿ 8 ನ್ನು ತೋರಿಸಲಾಗಿ ಅದಕ್ಕೆ ಅಬ್ದುಲ್ ಶುಕುರ್ ರವರು ಸಹಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 8 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ ಅಬ್ದುಲ್ ಶುಕುರ್ ರವರನ್ನು ನಿಪಿ 4 ರಲ್ಲಿ ತೋರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ 1 ಯಾವ ವರ್ಷ ಮಾಡಿರುತ್ತಾರೆ ಗೊತ್ತಿಲ್ಲ. ನಿಪಿ1 ರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ1 ನ್ನು ನನ್ನ ತಂದೆಯವರಿಗೆ ಶೆಟ್ಟರು ಕಡೆಯಿಂದ ಭೋಗ್ಯ ಬರೆದುಕೊಟ್ಟಿರುತ್ತಾರೆ. ನಿಪಿ 1 ನ್ನು ಎಷ್ಟು ಹಣಕ್ಕೆ ಮತ್ತು ಎಷ್ಟು ಸಮಯಕ್ಕೆ ಬರೆದುಕೊಟ್ಟಿರುತ್ತಾರೆ ಗೊತ್ತಿಲ್ಲ. ನಿಪಿ 1 ರ ಜಮೀನು ವ್ಯವಸಾಯದ ಜಮೀನು ಎಂದರೆ ನಿಜ. ನಿಪಿ1 ರ ಜಮೀನು ಗೇಣಿದಾರರ ಸ್ವತ್ತು ಎಂದರೆ ನಿಜ. ನಿಪಿ1 ರ ಗೇಣಿದಾರರ ಜಮೀನು ಸರ್ಕಾರಕ್ಕೆ ಸೇರಿರುತ್ತದೆ ಎಂದು 1974 ರಲ್ಲಿ ಕಾನೂನು ಬಂದಿರುತ್ತದೆ ಎಂದರೆ ನಿಜ. 1974 ರಲ್ಲಿ ಭೋಗ್ಯದ ಸ್ವತ್ತು ಮತ್ತು

ಗೇಣಿದಾರರ ಸ್ವತ್ತು ಮತ್ತು ಎಲ್ಲಾ ಸ್ವತ್ತುಗಳು ಸರ್ಕಾರಕ್ಕೆ ಸೇರಿರುತ್ತದೆ ಎಂದು ಕಾನೂನು ಬಂದಿರುತ್ತದೆ ಎಂದರೆ ಗೊತ್ತಿಲ್ಲ. 1974 ರಲ್ಲಿ ಕಾನೂನು ಬಂದ ನಂತರ ನನ್ನ ತಂದೆ ಗೇಣಿದಾರರು ಎಂದು ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ನನ್ನ ತಂದೆ ಭೋಗ್ಯದಾರರಾಗಿದ್ದು ಗೇಣಿದಾರರು ಅಲ್ಲ ಮತ್ತು ಅರ್ಜಿಯನ್ನು ಸಲ್ಲಿಸಿರುತ್ತಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. 1974 ರ ಮೊದಲು ಮತ್ತು ನಂತರ ಅಮೀರ್ ಸಾಬ್ ರವರು ದಾವಾ ಆಸ್ತಿಗೆ ಗೇಣಿದಾರರಾಗಿದ್ದು ಅವರೇ ಗೇಣಿ ಹಕ್ಕಿಗೆ ಸಂಬಂದಿಸಿದಂತೆ ನಮೂನೆ-7 ನ್ನು ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ.

17. ನಿಪಿ 5 ದಾವಾ ಆಸ್ತಿಗೆ ಸಂಬಂದಿಸಿದಂತೆ ಭೂ ನ್ಯಾಯ ಮಂಡಳಿಯ ಆದೇಶ ಪುಟ ಆಗಿರುತ್ತದೆ. ಸಾಕ್ಷಿಗೆ ಈಗ ನಿಪಿ 5 ರ 6 ನೇ ಪುಟವನ್ನು ಓದಿ ಹೇಳಲಾಗಿ ಅದರಲ್ಲಿ "ಕೇಸನ್ನು ಕೂಗಿಸಲಾಯಿತು ಅರ್ಜಿದಾರರು ಪ್ರತಿವಾದಿಗಳ ಪೈಕಿ ಸರ್ದಾರ್ ಖಾನ್, ರಾಮರಾಜು, ನಾಗೇಶ್ ಗುಪ್ತ ಹಾಜರು. ಸರ್ದಾರ್ ಖಾನ್ ಹಾಗೂ ರಾಮರಾಜುರವರ ಹೇಳಿಕೆಯನ್ನು ದಾಖಲು ಮಾಡಲಾಯಿತು, ಪುನಃ ವಾದ ವಿವಾದಗಳನ್ನು ಕೇಳಲಾಯಿತು ಅರ್ಜಿದಾರರಾದ ಅಮೀರ್ ಸಾಬ್ ರವರು ವ್ಯಾಜ್ಯದ ಜಮೀನಿನ ಗೇಣಿದಾರರೆಂದು ಒಮ್ಮತದಿಂದ ತೀರ್ಮಾನಿಸಲಾಯಿತು, ಆಜ್ಞೆಯನ್ನು ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು" ಎಂಬುದಾಗಿ ಬರೆಯಲಾಗಿದೆ ಎಂದರೆ ಗೊತ್ತಿಲ್ಲ.

18. ನಿಪಿ 1 ನ್ನು ಹೊರತುಪಡಿಸಿ ನಾವು ಕೊಟ್ಟಿರುವ ದಾಖಲೆಗಳಲ್ಲಿ 1960 ರಿಂದ ಈ ದಾವೆ ಹೂಡುವ ದಿನಾಂಕದವರೆಗೂ ನಾವುಗಳು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿರುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಮ್ಮ ವಕೀಲರನ್ನು ಕೇಳಬೇಕು ಎಂದು ಹೇಳುತ್ತಾರೆ. ನಿಪಿ 8 ರ ಪ್ರಕಾರ 1 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನತೆಯನ್ನು 2 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಿಸ್ತೀರ್ಣ 3 ಎಕರೆ 17 ಗುಂಟೆ ಇದ್ದು 7 ಗುಂಟೆ ಖರಾಬು ಜಮೀನು ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ- ಬಸವರಾಜುರವರ ಜಮೀನು ಇದೆ, ಪಶ್ಚಿಮಕ್ಕೆ- ನನ್ನ ಸಹೋದರರ ಜಮೀನು ಇದೆ, ಉತ್ತರಕ್ಕೆ- ನರಸಯ್ಯರವರ ಜಮೀನು ಇರಬಹುದು, ದಕ್ಷಿಣಕ್ಕೆ- ಗುಂಡುತೋಪು ಕೆಂಪಯ್ಯರವರ ಜಮೀನು ಇದೆ. ಭೂ ನ್ಯಾಯ ಮಂಡಳಿಯಲ್ಲಿ ಅಮೀರ್ ಸಾಬ್ ರವರಿಗೆ ಗೇಣಿದಾರರ ಹಕ್ಕನ್ನು ದಾವಾ ಆಸ್ತಿಗೆ ಸಂಬಂದಿಸಿದಂತೆ ಕೊಟ್ಟ ನಂತರ ಅಮೀರ್ ಸಾಬ್ ರವರು ದಾವಾ ಆಸ್ತಿಗೆ ಭೂ ಕಂದಾಯ ಕಟ್ಟುತ್ತಿದ್ದರು ಎಂದರೆ ಗೊತ್ತಿಲ್ಲ. ಅಮೀರ್ ಸಾಬ್ ರವರು ತೀರಿಕೊಂಡ ನಂತರ ದಾವಾ ಆಸ್ತಿಯ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಅಮೀರ್ ಸಾಬ್ ರವರು ತೀರಿಕೊಂಡ ನಂತರ 1 ನೇ ಪ್ರತಿವಾದಿ ನಮ್ಮ ಸಹೋದರರ ಕಡೆ ಹೋಗಿದ್ದು ಖಾತೆ ಬದಲಾವಣೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ನಿಪಿ 8 ರ ಮೂಲಕ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ 2 ನೇ

ಪ್ರತಿವಾದಿಗೆ ದಾವಾ ಆಸ್ತಿಯನ್ನು ನಿಪಿ8 ರ ಮೂಲಕ ಮಾರಾಟ ಮಾಡಿ 22 ವರ್ಷ ಆಗಿರುತ್ತದೆ ಎಂದರೆ ಗೊತ್ತಿಲ್ಲ. 2004 ರಲ್ಲಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ನಿಪಿ 8 ರ ಮೂಲಕ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ 22 ವರ್ಷಗಳಿಂದ 2 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಮಾರಾಟ ಮಾಡಿದ ವಿಷಯ 2019 ರಲ್ಲಿ ನಮಗೆ ಗೊತ್ತಾಗಿದ್ದು ನಾವು ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತೇವೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**